ಸಾಕ್ಷಿಯನ್ನು ದಿಃ 10-08-2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಆರ್ ಎಸ್ ಹೆಚ್ ವಕೀಲರಿಂದಃ(ಪ್ರತಿವಾದಿ ನಂ.4 ಪರವಾಗಿ)**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲ ವಿಷಯಗಳನ್ನು ನಾನೇ ಹೇಳಿ ಬರೆಯಿಸಿದ್ದು, ಸದರಿ ವಿಷಯಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

**ಪಾಟೀ ಸವಾಲುಃ ಶ್ರೀ. ಹೆಚ್ ಎಮ್ ಎನ್ ವಕೀಲರಿಂದ (ವಾದಿ ಪರವಾಗಿ)**

ನನ್ನ ಮುಖ್ಯ ವಿಚಾರಣೆಯನ್ನು ದಾವಾ ಆಸ್ತಿ ಖರೀದಿ ಕೊಡುವ ಕಾಲಕ್ಕೆ ಬರೆಯಲಾಗಿದೆ. ನನ್ನ ಮುಖ್ಯ ವಿಚಾರಣೆಯಲ್ಲಿ 4 ಎಕರೆ 23 ಗುಂಟೆ ಜಮೀನನ್ನು ಪ್ರತಿವಾದಿ ನಂ.2 ಅಬ್ದುಲ್ ಸಮ್ಮದ್ ಇವರು ಹನಮಪ್ಪ ಮಲ್ಲಪ್ಪ ನೀಲಣ್ಣವರ ಇವರಿಗೆ ಮಾರಾಟ ಮಾಡಿದ್ದಾರೆ ಎಂದು ಬರೆಯಲಾಗಿದೆ. ಖರೀದಿ ಕಾಲಕ್ಕೆ ನಾನು ಆಸ್ತಿ ಉತಾರೆಯನ್ನು ನೋಡಿಲ್ಲ. ಸಾಕ್ಷಿ ಮುಂದುವರೆದು ಆ ದಿನ ನನಗಿಂತ ಹಿರಿಯರು ಸೇರಿದ್ದರು ಅವರು ನೋಡಿದ್ದಾರೆ ಎಂದು ಹೇಳುತ್ತಾರೆ. ಆ ದಿನ ಸಿ ಬಿ ಬಡ್ನಿ, ಬಿ ಎಮ್ ವಾಲಿ, ನಾನು ಹಾಗೂ ಫಕ್ಕಿರೇಶ ಹಿರೇಮನಿ ಹಿರಿಯರಾಗಿ ಸೇರಿದ್ದೆವು. ಖರೀದಿ ಪತ್ರ ಬರೆಯಲು ಸಿ ಬಿ ಬಡ್ನಿ ಮಾಹಿತಿ ನೀಡಿದರು. ಖರೀದಿ ಪತ್ರಕ್ಕೆ ನಾನು ಸೇರಿದಂತೆ ಮೇಲೆ ಹೇಳಿದ ನಾಲ್ಕು ಜನ ಸಾಕ್ಷಿ ಸಹಿ ಮಾಡಿದ್ದೇವೆ. ನಾಲ್ಕು ಜನ ಸಾಕ್ಷಿ ಸಹಿ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.4 ಮಲ್ಲಪ್ಪ ನೀಲಣ್ಣವರ ಮತ್ತು ನಾನು ಒಂದೇ ಊರಿನವರು ಎಂದರೆ ಸರಿ. ನಾನು ಯಾವುದೇ ಖರೀದಿ ವ್ಯವಹಾರದಲ್ಲಿ ಅಥವಾ ಖರೀದಿ ಪತ್ರ ಮಾಡುವ ಸಮಯದಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಇವರು ಪ್ರತಿವಾದಿ ನಂ.4 ರವರಿಗೆ ದಾವಾ ಆಸ್ತಿ ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.4 ರವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪ್ರತಿವಾದಿ ಗೈರು ಹಾಜರಿದ್ದು, ಯಾರೂ ಪ್ರತಿನಿಧಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.